# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಡಿ-7068/2021/ಡಿ.ಆರ್.ಇ-2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 29/04/2022

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಅಡವೀಶ್ ಕುಮಾರ್, ಪಿ.ಡಿ.ಓ., ಕೋರಗೆರೆ ಗ್ರಾಮ ಪಂಚಾಯತಿ (ಪ್ರಸ್ತುತ ದೊಡ್ಡ ಎಣ್ಣೇಗೆರೆ ಗ್ರಾಮ ಪಂಚಾಯತಿ), ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ರವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

ಶ್ರೀ.ಎಂ.ಆರ್.ನಟರಾಜು ಬಿನ್ ರಾಮೇಗೌಡ, ಗುರುಕೃಪ ನಿಲಯ, ಎಸ್.ಬಿ.ಐ. ಬ್ಯಾಂಕ್ ಮುಂಭಾಗ, ಹುಳಿಯಾರು, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, ಶ್ರೀ.ಅಡವೀಶ್ ಕುಮಾರ್, ಪಿ.ಡಿ.ಓ., ಕೋರಗೆರೆ ಗ್ರಾಮ ಪಂಚಾಯತಿ (ಪ್ರಸ್ತುತ ದೊಡ್ಡ ಎಣ್ಣೇಗೆರೆ ಗ್ರಾಮ ಪಂಚಾಯತಿ), ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ದಿನಾಂಕ:26-10-2017 ರಂದು ಕೋರಗೆರೆ ಗ್ರಾಮ ಪಂಚಾಯತಿಯಲ್ಲಿ ನಡೆದ ವಾರ್ತಾ ಸಭೆಯಲ್ಲಿ ಮಡಿವಾಳ ಜನಾಂಗದ ಲಲಿತಮ್ಮ ಕೋಂ ಗವಿರಂಗಯ್ಯ ಎಂಬುವವರನ್ನು ಆಶ್ರಮ ಮನೆಗೆ ಫಲಾನುಭವಿಯಾಗಿ ಆಯ್ಕೆ ಮಾಡಿದ್ದರೂ ಸಹಾ, ಸಭೆಯ ನಂತರ ಕುರುಬ ಜನಾಂಗದ ಲಕ್ಷ್ಮಮ್ಮ ಕೋಂ ಗವಿರಂಗಯ್ಯ ಎಂಬುವವರ ಹೆಸರನ್ನು ತಿದ್ದಿ, ಕಾನೂನು ಬಾಹಿರವಾಗಿ ಎದುರುದಾರರು ಮನೆ ಮಂಜೂರು ಮಾಡಿರುತ್ತಾರೆ. ಲಕ್ಷ್ಮಮ್ಮ ಕೋಂ ಗವಿರಂಗಯ್ಯ ರವರಿಗೆ ಸಾಕಷ್ಟು

ಆರ್‌ಟಿಸಿ ನಂ:109, 106/5, 94/7ಬಿ, 113, 151, 25/5 ಮತ್ತು ಖಾತೆ ನಂ:17/21 ಅಳತೆ ಆರ್‌ಸಿಸಿ ಮನೆ ಇದ್ದರೂ ಸಹಾ, ಇವರಿಗೆ ಅಕ್ರಮವಾಗಿ ಮನೆ ಮಂಜೂರು ಮಾಡಿ ಕರ್ತವ್ಯಲೋಪ ಎಸಗಿರುತ್ತಾರೆ. ಆದ್ದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿದ್ದಾರೆ.

3. ದೂರಿನ ಜೊತೆಗೆ ಕಂದಾಯ ಇಲಾಖೆಯ ನಮೂನೆ–ಎಫ್‌ರ ಪತ್ರ, ಆರ್.ಟಿ.ಸಿ., Beneficiary Status, 2018-19ನೇ ಸಾಲಿನ ಭೂ ಮತ್ತು ಕಟ್ಟಡಗಳ ತೆರಿಗೆ ಬಾಬ್ತು, ವಂಶವೃಕ್ಷ ಹಾಗೂ ಇತರೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

4. ಎದುರುದಾರರ ಆಕ್ಷೇಪಣೆ ಕೋರಲಾಗಿ, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ, ನಾನು ದಿನಾಂಕ:07–12–2018 ರಂದು ಕೊರಗೆರೆ ಗ್ರಾಮ ಪಂಚಾಯತಿಯ ಕಾರ್ಯದರ್ಶಿ ಹುದ್ದೆಯ ಪ್ರಭಾರವನ್ನು ವಹಿಸಿಕೊಟ್ಟಿರುತ್ತೇನೆ. ದಿನಾಂಕ:26–10–2017 ರಂದು ಕೊರಗೆರೆ ಗ್ರಾಮ ಪಂಚಾಯತಿಯಲ್ಲಿ ನಡೆದ ವಾರ್ತಾ ಸಭೆಯಲ್ಲಿ ವಸತಿ ಯೋಜನೆ ಅಡಿ ಫಲಾನುಭವಿಗಳ ಆಯ್ಕೆ ಸಂಬಂಧ ಕೊರಗೆರೆ ಗ್ರಾಮ ಪಂಚಾಯತಿಯ ಅಧ್ಯಕ್ಷರಾದ ಶ್ರೀ.ಕೆ.ಎಂ.ಮಂಜುನಾಥ ಹಾಗೂ ಶ್ರೀ.ಬಿ.ಸುರೇಶ ಬಾಜು, ಶಾಸಕರು, ಚಿಕ್ಕನಾಯಕನಹಳ್ಳಿ ಕ್ಷೇತ್ರ ಹಾಗೂ ಎಸ್.ಪಿ.ಮುದ್ದಹನುಮೇಗೌಡ, ಲೋಕಸಭಾ ಸದಸ್ಯರು ಹಾಗೂ ಗ್ರಾಮ ಪಂಚಾಯತಿಯ ಸದಸ್ಯರು ಹಾಗೂ ಇತರೆ ಗ್ರಾಮ ಪಂಚಾಯತಿ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯಿತಿ ಹಾಗೂ ನೋಡಲ್ ಅಧಿಕಾರಿ ಹಾಗೂ ಗ್ರಾಮಸ್ಥರ ಸಮಕ್ಷಮ ನಡೆದ ಸಭೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿರುತ್ತದೆ. ನಾನು ಕೇವಲ ಸಭೆಯನ್ನು ಆಯೋಜನೆ ಮಾಡುವುದು ನನ್ನ ಕರ್ತವ್ಯ ಆಗಿರುತ್ತದೆ. ಫಲಾನುಭವಿಗಳನ್ನು ಆಯ್ಕೆ ಮಾಡುವುದರಲ್ಲಿ ನನ್ನ ಪಾತ್ರವಿರುವುದಿಲ್ಲ. ದೂರಿನಲ್ಲಿ ಆರೋಪಿಸಿರುವಂತೆ ಫಲಾನುಭವಿಯಾದ ಲಕ್ಕಮ್ಮ ಕೋಂ ಗವಿರಂಗಯ್ಯ ರವರ ಹೆಸರನ್ನು ನಾನು ತಿದ್ದಿ ಸೇರ್ಪಡೆ ಮಾಡಿರುವುದಿಲ್ಲ ಹಾಗೂ ಅವರ ಹೆಸರಿನಲ್ಲಿ ಜಮೀನು, ಕೊಳವೆ ಬಾವಿ ಇದೆ ಎಂಬ ವಿಚಾರದಲ್ಲಿ ಯಾವುದೇ ಸತ್ಯಾಂಶವಿರುವುದಿಲ್ಲ. ದುರುದ್ದೇಶದಿಂದ ನನ್ನ ಮೇಲೆ ಸುಳ್ಳು ದೂರನ್ನು ದಾಖಲು ಮಾಡಿರುತ್ತಾರೆ ಎಂದು ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿ, ಪಂಚಾಯತಿ ಸಾಮಾನ್ಯ ಸಭೆಯ ನಡವಳಿ ಹಾಗೂ ಫಲಾನುಭವಿಗಳ ಪಟ್ಟಿ ಹಾಗೂ ಇತರೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

5. ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಸಲ್ಲಿಸಿರುವ ಪ್ರತ್ಯುತ್ತರದಲ್ಲಿ, ಎದುರುದಾರರು ಆಕ್ಷೇಪಣೆಯಲ್ಲಿ ಹೇಳಿರುವ ಅಂಶಗಳನ್ನು ನಿರಾಕರಿಸಿ, ದೂರಿನ ಅಂಶಗಳನ್ನು ಪುನರುಚ್ಚರಿಸಿ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

6. ದೂರಿನ ಅಂಶಗಳು, ಎದುರುದಾರರ ಆಕ್ಷೇಪಣೆ ಹಾಗೂ ಅದರ ಜೊತೆ ಲಗತ್ತಿಸಿರುವ ದಾಖಲೆಗಳು, ದೂರುದಾರರ ಪ್ರತ್ಯುತ್ತರ ಹಾಗೂ ಕಡತದಲ್ಲಿ ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ನೋಡಲಾಗಿ, ದಿನಾಂಕ:26-10-2017 ರಂದು ಕೋರಗೆರೆ ಗ್ರಾಮ ಪಂಚಾಯತಿಯಲ್ಲಿ ನಡೆದ ವಾರ್ತಾ ಸಭೆಯಲ್ಲಿ ಮಡಿವಾಳ ಜನಾಂಗದ ಲಲಿತಮ್ಮ ಕೋಂ ಗವಿರಂಗಯ್ಯ ಎಂಬುವವರನ್ನು ಆಶ್ರಮ ಮನೆಗೆ ಫಲಾನುಭವಿಯಾಗಿ ಆಯ್ಕೆ ಮಾಡಿದ್ದರೂ ಸಹಾ, ಸಭೆಯ ನಂತರ ಕುರುಬ ಜನಾಂಗದ ಲಕ್ಷ್ಮಮ್ಮ ಕೋಂ ಗವಿರಂಗಯ್ಯ ಎಂಬುವವರ ಹೆಸರನ್ನು ತಿದ್ದಿ, ಕಾನೂನು ಬಾಹಿರವಾಗಿ ಎದುರುದಾರರು ಮನೆ ಮಂಜೂರು ಮಾಡಿರುತ್ತಾರೆ. ಲಕ್ಷ್ಮಮ್ಮ ಕೋಂ ಗವಿರಂಗಯ್ಯ ರವರಿಗೆ ಸಾಕಷ್ಟು ಆರ್‌ಟಿಸಿ ನಂ:109, 106/5, 94/7ಬಿ, 113, 151, 25/5 ಮತ್ತು ಖಾತೆ ನಂ:17/21 ಅಳತೆ ಆರ್‌ಸಿಸಿ ಮನೆ ಇದ್ದರೂ ಸಹಾ, ಇವರಿಗೆ ಅಕ್ರಮವಾಗಿ ಮನೆ ಮಂಜೂರು ಮಾಡಿ ಕರ್ತವ್ಯಲೋಪ ಎಸಗಿರುತ್ತಾರೆ ಎಂಬುದು ದೂರುದಾರರ ಆರೋಪವಾಗಿದೆ.

7. ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯ ಪ್ರಕಾರ, ದಿನಾಂಕ:26-10-2017 ರಂದು ಕೋರಗೆರೆ ಗ್ರಾಮ ಪಂಚಾಯತಿಯಲ್ಲಿ ನಡೆದ ವಾರ್ತಾ ಸಭೆಯಲ್ಲಿ ವಸತಿ ಯೋಜನೆ ಅಡಿ ಫಲಾನುಭವಿಗಳ ಆಯ್ಕೆ ಸಂಬಂಧ ಕೋರಗೆರೆ ಗ್ರಾಮ ಪಂಚಾಯತಿಯ ಅಧ್ಯಕ್ಷರಾದ ಶ್ರೀ.ಕೆ.ಎಂ.ಮಂಜುನಾಥ ಹಾಗೂ ಶ್ರೀ.ಬಿ.ಸುರೇಶ ಬಾಜು, ಶಾಸಕರು, ಚಿಕ್ಕನಾಯಕನಹಳ್ಳಿ ಕ್ಷೇತ್ರ ಹಾಗೂ ಎಸ್.ಪಿ.ಮುದ್ದಹನುಮೇಗೌಡ, ಲೋಕಸಭಾ ಸದಸ್ಯರು ಹಾಗೂ ಗ್ರಾಮ ಪಂಚಾಯತಿಯ ಸದಸ್ಯರು ಹಾಗೂ ಇತರೆ ಗ್ರಾಮ ಪಂಚಾಯತಿ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯಿತಿ ಹಾಗೂ ನೋಡಲ್ ಅಧಿಕಾರಿ ಹಾಗೂ ಗ್ರಾಮಸ್ಥರ ಸಮಕ್ಷಮ ನಡೆದ ಸಭೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಕೇವಲ ಸಭೆಯನ್ನು ಆಯೋಜನೆ ಮಾಡುವುದು ನನ್ನ ಕರ್ತವ್ಯ ಆಗಿರುತ್ತದೆ. ಫಲಾನುಭವಿಗಳನ್ನು ಆಯ್ಕೆ ಮಾಡುವುದರಲ್ಲಿ ನನ್ನ ಪಾತ್ರವಿರುವುದಿಲ್ಲ. ಶ್ರೀಮತಿ.ಲಕ್ಕಮ್ಮ ರವರ ಹೆಸರಿನಲ್ಲಿ ಯಾವುದೇ ಜಮೀನು,

ಕೊಳವೆ ಬಾವಿ ಇರುವುದಿಲ್ಲ. ದೂರಿನಲ್ಲಿ ಆರೋಪಿಸಿರುವಂತೆ ಫಲಾನುಭವಿಯಾದ ಲಕ್ಕಮ್ಮ ಕೋಂ ಗವಿರಂಗಯ್ಯ ರವರ ಹೆಸರನ್ನು ನಾನು ತಿದ್ದಿ ಸೇರ್ಪಡೆ ಮಾಡಿರುವುದಿಲ್ಲ. ಆದ್ದರಿಂದ, ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

8. ಪ್ರಸ್ತುತ ಪ್ರಕರಣದಲ್ಲಿ ಲಭ್ಯವಿರುವ ದೂರಿನ ಅಂಶಗಳು, ಆಕ್ಷೇಪಣೆಯ ಅಂಶಗಳು ಹಾಗೂ ದಾಖಲೆಗಳನ್ನು ಪರಿಶೀಲಿಸಿದಾಗ, ದಿ:26-10-2017 ರಂದು ಕೋರಗೆರೆ ಗ್ರಾಮ ಪಂಚಾಯತಿ ಆವರಣದಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ವ್ಯಾಪ್ತಿಯ ಜನ ಪ್ರತಿನಿಧಿಗಳು, ಅಧ್ಯಕ್ಷರು, ಕೋರಗೆರೆ ಗ್ರಾಮ ಪಂಚಾಯತಿ, ಶಿಶು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನೋಡಲ್ ಅಧಿಕಾರಿ ಹಾಗೂ ಪಿ.ಡಿ.ಓ., ರವರ ಸಮಕ್ಷಮ ಆಗಿರುವ ಗ್ರಾಮ ಸಭೆಯಲ್ಲಿ ಬಸವ ವಸತಿ ಯೋಜನೆ ಅಡಿ ಫಲಾನುಭವಿಗಳನ್ನು ಆಯ್ಕೆ ಮಾಡಿರುತ್ತಾರೆ. ಅದರಲ್ಲಿ ದೂರಿನಲ್ಲಿ ಉಲ್ಲೇಖಿಸಿರುವ ಲಲಿತಮ್ಮ ಕೋಂ ಗವಿರಂಗಯ್ಯ ಮೋಟಿಹಳ್ಳಿ-ಮಡಿವಾಳ ಜಾತಿ ರವರನ್ನು ಆಯ್ಕೆ ಮಾಡಿರುವುದು ಕಂಡುಬರುತ್ತದೆ. ಆದರೆ, ಸದರಿ ಆಯ್ಕೆ ಪಟ್ಟಿಯಲ್ಲಿ ಲಲಿತಮ್ಮ ಎಂದು ಇರುವ ಹೆಸರಿನ ಮೇಲೆ ಲಕ್ಕಮ್ಮ ಎಂದು ತಿದ್ದಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಎದುರುದಾರರ ಪ್ರಕಾರ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ನನ್ನ ಪಾತ್ರ ಇರುವುದಿಲ್ಲ ಹಾಗೂ ನಾನು ಹೆಸರನ್ನು ತಿದ್ದಿರುವುದಿಲ್ಲ ಎಂದು ಹೇಳುತ್ತಾರೆ. ಆದರೆ, ಸಾಮಾನ್ಯ ಸಭೆಯಲ್ಲಿ ಫಲಾನುಭವಿಯಾಗಿ ಆಯ್ಕೆ ಮಾಡಿರುವ ಲಲಿತಮ್ಮ ಕೋಂ ಗವಿರಂಗಯ್ಯ ರವರ ಬದಲಿಗೆ ಲಕ್ಕಮ್ಮ ಎಂದು ತಿದ್ದುಪಡಿ ಮಾಡಿರುವ ಕುರಿತು ಯಾವುದೇ ನೋಡಲ್ ಅಧಿಕಾರಿ ಅಥವಾ ಸಾಮಾನ್ಯ ಸಭೆಯಲ್ಲಿ ನಿರ್ಣಯವಾಗಿರುವ ಕುರಿತು ಯಾವುದೇ ಪ್ರತ್ಯೇಕ ಆದೇಶ ಅಥವಾ ಷರಾ ಇರುವುದಿಲ್ಲ ಹಾಗೂ ತಿದ್ದುಪಡಿ ಮಾಡಿರುವ ಹೆಸರಿನ ಮೇಲೆ ತಿದ್ದುಪಡಿ ಮಾಡಿರುವ ಅಧಿಕಾರಿಯ ಯಾವುದೇ ಚಿಕ್ಕ ಸಹಿ ಇರುವುದಿಲ್ಲ. ಒಂದು ಸಾರಿ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಿರುವ ಫಲಾನುಭವಿಗಳ ಪಟ್ಟಿಯು ಅಂತಿಮವಾದ ನಂತರ ಆ ಫಲಾನುಭವಿಗಳ ಪಟ್ಟಿ ಗ್ರಾಮ ಪಂಚಾಯತಿಯ ಜವಾಬ್ದಾರಿಯುತ ಅಧಿಕಾರಿ ಪಿ.ಡಿ.ಓ., ರವರ ವಶದಲ್ಲಿ ಇರುತ್ತದೆ. ಆತನ ವಶದಲ್ಲಿ ಇರುವಾಗ ಯಾವುದೇ ದಾಖಲೆ ತಿದ್ದುಪಡಿಯಾದಲ್ಲಿ ಅದಕ್ಕೆ ಸಂಬಂಧಪಟ್ಟ ಸಮಾದಾನಕರ ಕಾರಣಗಳನ್ನು ಹಾಗೂ ಸಮಜಾಯಿಷಿಕೆಯನ್ನು ಎದುರುದಾರರು ಕೊಡಬೇಕಾಗಿರುತ್ತದೆ. ಆದರೆ, ಸದರಿ ಪ್ರಕರಣದಲ್ಲಿ ಫಲಾನುಭವಿಗಳ ಆಯ್ಕೆಯಲ್ಲಾಗಲೀ ಅಥವಾ ತಿದ್ದುಪಡಿಯಲ್ಲಾಗಲೀ ನನ್ನ ಪಾತ್ರ ಇರುವುದಿಲ್ಲ ಎಂದು ಎದುರುದಾರರು ತನ್ನ ಜವಾಬ್ದಾರಿಯುತ

ಕರ್ತವ್ಯದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸಂಸ್ಥೆಯನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ಮುಖ್ಯವಾಗಿ ತಿದ್ದುಪಡಿ ಮಾಡಿರುವ ಹೆಸರಿನ ಕೆಳಗೆ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದಂತಹ ನೋಡಲ್ ಅಧಿಕಾರಿ ಅಥವಾ ಯಾವುದೇ ಅಧಿಕಾರಿಗಳ ಸಹಿ ಇಲ್ಲದ ಕಾರಣ, ಸದರಿ ಫಲಾನುಭವಿಗಳ ಪಟ್ಟಿ ಎದುರುದಾರರ ವಶದಲ್ಲಿಯೇ ಇರುವ ಕಾರಣ, ಲಲಿತಮ್ಮ ಕೋಂ ಗವಿರಂಗಯ್ಯ-ಮಡಿವಾಳ ಎಂಬ ಹೆಸರಿನ ಬದಲಿಗೆ ಲಕ್ಕಮ್ಮ ಕೋಂ ಗವಿರಂಗಯ್ಯ-ಮಡಿವಾಳ ಎಂದು ಫಲಾನುಭವಿಯ ಹೆಸರು ತಿದ್ದುಪಡಿ ಆಗಿರುವ ಕುರಿತು ಎದುರುದಾರರೇ ಜವಾಬ್ದಾರರಾಗಿದ್ದು, ಎದುರದಾರರು ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡುಬರುತ್ತದೆ.

9. ಸದರಿ ಪ್ರಕರಣದಲ್ಲಿ ಲಭ್ಯವಿರುವ ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ಪರಿಶೀಲಿಸಿ ನೋಡಲಾಗಿ, ಮುಖ್ಯವಾಗಿ ತಿದ್ದುಪಡಿಯ ಫಲಾನುಭವಿ ಶ್ರೀಮತಿ.ಲಕ್ಕಮ್ಮ ಕೋಂ ಗವಿರಂಗಯ್ಯ ರವರು ಮೂಲತಃ ಕುರುಬ ಜಾತಿಗೆ ಸೇರಿದವರಾಗಿದ್ದು, ಅವರ ಮಾವ ಅಂದರೆ ಗಂಡನ ತಂದೆ ನಂಜುಂಡಯ್ಯ ಬಿನ್ ಸಣ್ಣರಂಗಪ್ಪ ರವರ ಹೆಸರಿನಲ್ಲಿ ಸ.ನಂ.109ರಲ್ಲಿ 10.23 ಎಕರೆ ಹಾಗೂ ಸ.ನಂ.27, 75, 94/8, 106/3ರಲ್ಲಿ ಸಾಕಷ್ಟು ಜಮೀನುಗಳು ಇರುವುದು ಕಂಡುಬರುತ್ತದೆ. ಸದರಿ ಪ್ರಕರಣದಲ್ಲಿ ಲಕ್ಕಮ್ಮ ಕೋಂ ಗವಿರಂಗಯ್ಯ ರವರು ಮೂಲತಃ ಕುರುಬ ಜಾತಿಗೆ ಸೇರಿದವರಾಗಿದ್ದರೂ ಸಹಾ ಫಲಾನುಭವಿಗಳ ಆಯ್ಕೆ ಪಟ್ಟಿಯಲ್ಲಿ ಸಾಮಾನ್ಯ ಸಭೆಯಲ್ಲಿ ಆಯ್ಕೆಯಾಗಿದ್ದ ಮೂಲ ಫಲಾನುಭವಿಯಾದ ಶ್ರೀಮತಿ.ಲಲಿತಮ್ಮ ಕೋಂ ಗವಿರಂಗಯ್ಯ-ಮಡಿವಾಳ ಜಾತಿ ರವರ ಬದಲಿಗೆ ಫಲಾನುಭವಿಯಾಗಲು ಅರ್ಹರಲ್ಲದ ಹಾಗೂ ಕುರುಬ ಜಾತಿಗೆ ಸೇರಿದ ಶ್ರೀಮತಿ.ಲಕ್ಕಮ್ಮ ಕೋಂ ಗವಿರಂಗಯ್ಯ-ಮಡಿವಾಳ ಜಾತಿ ಎಂದು ಯಾವುದೇ ಅಧಿಕಾರಿಗಳ ಆದೇಶವಿಲ್ಲದೆ ತಿದ್ದುಪಡಿ ಮಾಡಿ, ಎದುರುದಾರರಾದ ಶ್ರೀ.ಅಡಿವೀಶ್ ಕುಮಾರ್ ರವರು ಸ್ವತಃ ಸ್ಥಳದಲ್ಲಿ ಜಿಪಿಎಸ್ ಮಾಡಿ, ಅನುದಾನ ಮಂಜೂರು ಮಾಡಿ, ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ನಷ್ಟ ಉಂಟು ಮಾಡಿ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡುಬರುತ್ತದೆ.

10. ಆದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ದಾಖಲೆಗಳ ಆಧಾರಗಳಿಂದ, ಎದುರುದಾರರಾದ ಶ್ರೀ.ಅಡವೀಶ್ ಕುಮಾರ್, ಪಿ.ಡಿ.ಓ., ಕೋರಗೆರೆ ಗ್ರಾಮ ಪಂಚಾಯತಿ (ಪ್ರಸ್ತುತ ದೊಡ್ಡ ಎಣ್ಣೇಗೆರೆ ಗ್ರಾಮ ಪಂಚಾಯತಿ), ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ರವರು

ಕೋರಗೆರೆ ಗ್ರಾಮ ಪಂಚಾಯತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಶ್ರೀಮತಿ.ಲಕ್ಕಮ್ಮ ಕೋಂ ಗವಿರಂಗಯ್ಯ ರವರಿಗೆ ಬಸವ ವಸತಿ ಯೋಜನೆ ಅಡಿಯಲ್ಲಿ ಬಿಡುಗಡೆ ಮಾಡಿರುವ ಸಂಪೂರ್ಣ ಅನುದಾನದ ಮೊತ್ತವನ್ನು ವಸೂಲಾತಿ ಮಾಡುವ ಕುರಿತು ಕಾನೂನು ಪ್ರಕಾರ ಸೂಕ್ತ ಕ್ರಮ ಜರುಗಿಸಲು ಸಂಬಂಧಪಟ್ಟವರಿಗೆ ನಿರ್ದೇಶಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

K.N. Phaneendra 29/4/22

[ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.